ನಿಮಿಷಗಳಲ್ಲಿ ಹೋಂ ಮಿನಿಸ್ಟರ್ ಅನಿಲ್ ಪವಾರ್ ಕೂಡ ಬರುತ್ತಿದ್ದಾರೆ. ಸೊಸೈಟಿಯಲ್ಲಿ ಶ್ರೀಮಂತಿಕೆ ಅಂಥ ದೊಡ್ಡ ವಿಷಯವೇನೂ ಅಲ್ಲ. ಪವರ್ ಇದೆಯಲ್ಲ ಅದು ಎಲ್ಲಕ್ಕಿಂತಲೂ ದೊಡ್ಡದು. ಎಂಥಾ ಶ್ರೀಮಂತರಾದರೂ ಮಿನಿಸ್ಟರ್‌ಗಳ ಮುಂದೆ, ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲಬೇಕು ನೋಡಿ. ಶ್ರೀಮಂತಿಕೆ ಕೂಡ ಕಡಿಮೆಯೇನಲ್ಲ. ದುಡ್ಡು ಇಂಥ ಶಕ್ತಿಕೇಂದ್ರಗಳನ್ನೂ ತಕಥೈ ಎಂದು ಕುಣಿಸಬಲ್ಲದು. ವಿಕ್ರಂ ದೇಶಪಾಂಡೆ ಕುಟುಂಬದ ಜೊತೆಗೆ ನಿಮ್ಮ ಕುಟುಂಬ ಡಿನ್ನರ್ ಮುಗಿಸಿಕೊಂಡು ಹೋಗಬೇಕೆನ್ನುವುದು ಅವರ ಆಸೆ. ನನ್ನದೂ ಕೂಡ' ಎಂದಿದ್ದ.

ಗುನ್ನಾಲಾಲ್ ಮಾಯೆಗೊಳಗಾದವನಂತೆ ತಲೆಯಾಡಿಸಿದ್ದ. ಅಷ್ಟರಲ್ಲಿ ಹೋಂ ಮಿನಿಸ್ಟರ್ ಬಂದಿದ್ದರು. ಅಲಂಕೃತಗೊಂಡ ಸ್ಟೇಜ್ ಮೇಲೆ ಸುಮಾರಾದ ಕೇಕನ್ನು ಸುಂದರವಾದ ಗ್ಲಾಸ್ ಟೇಬಲ್ ಮೇಲೆ ಇಡಲಾಗಿತ್ತು. ಸುಮಧುರವಾದ ಸಂಗೀತ ತಂಗಾಳಿಯಂತೆ ಹರಡಿಕೊಳ್ಳುತ್ತಿರುವಾಗ ವಿಕ್ರಂ ದೇಶಪಾಂಡೆಯ ಮಗಳು ಪೂರ್ವಿಕಾ ದೇಶಪಾಂಡೆ ಸೈಡ್ ವಿಂಗ್‌ನಿಂದ ಮೆಲ್ಲನೆ ನಡೆದು ಬಂದಳು! ಸರಳವಾದ ಉಡುಪು ಆಭರಣಗಳಲ್ಲಿ ಅವಳು ಮಿನುಗುತಾರೆಯಂತೆ ಕಂಗೊಳಿಸುತ್ತಿದ್ದಳು. ಆಸ್ಕರ್ ವೈಲ್ಡ್ ತದೇಕಚಿತ್ತನಾಗಿ ಪೂರ್ವಿಕಾ ದೇಶಪಾಂಡೆಯನ್ನು ಕಣ್ತುಂಬಿಸಿಕೊಂಡಿದ್ದ. ಒನಪು ವಯ್ಯಾರಗಳನ್ನೇ ಧರಿಸಿದ ಚಂದನದ ಗೊಂಬೆಯಂತೆ ಕಂಗೊಳಿಸುತ್ತಿದ್ದ ಅವಳನ್ನು ನೋಡಿ ಥಟ್ಟನೆ ಆಸ್ಕರ್ ವೈಲ್ಡನಿಗೆ ಕನಸು ನೆನಪಾಗಿತ್ತು. ಅವನು ಇನ್ನಿಲ್ಲದೆ ರೋಮಾಂಚನಗೊಂಡ. ಓಹ್! ಹೌದು ತನ್ನೊಂದಿಗೆ ಕನಸಿನಲ್ಲಿ ನೃತ್ಯ ಮಾಡಲು ನಿರಾಕರಿಸಿದ ಚೆಲುವೆ ಊರ್ಮಿಳಾ ಇವಳೇ ಇರಬೇಕೆಂದು ಕ್ಷಣ ಗಲಿಬಿಲಿಗೊಂಡ. ಹುಡುಗಿ ಕೇಕ್ ಕತ್ತರಿಸಿ ತನ್ನ ತಂದೆ–ತಾಯಿಯರ ಬಾಯಿಗೆ ಇಟ್ಟಿದ್ದಳು. ಹೋಂ ಮಿನಿಸ್ಟರ್ ವಿಶ್ ಮಾಡಿ ತಂದಿದ್ದ ಗಿಫ್ಟ್ ಕೊಟ್ಟು ಬೇರೊಂದು ತುರ್ತು ಕಾರ್ಯಕ್ರಮ ಇದ್ದುದರಿಂದ ಕೂಡಲೇ ಅಲ್ಲಿಂದ ತೆರಳಿದರು.

ಗುನ್ನಾಲಾಲ್ ಕೂಡ ಕುಟುಂಬ ಸದಸ್ಯರೊಂದಿಗೆ ಸ್ಟೇಜ್ ಮೇಲೆ ಹೋಗಿ ಪೂರ್ವಿಕಾ ದೇಶಪಾಂಡೆಗೆ ವಿಶ್ ಮಾಡಿದ್ದ. ಅಹಲ್ಯಾ ರಾಣಿ ತಾನು ಗಿಫ್ಟಾಗಿ ತಂದಿದ್ದ ಒಂಬತ್ತು ಲಕ್ಷದ ಡೈಮಂಡ್ ನೆಕ್ಲೇಸನ್ನು ತಾನೇ ಕೈಯಾರೆ ಪೂರ್ವಿಕಾಳ ಕೊರಳಿಗೆ ಹಾಕಿದ್ದಳು. ಅವಳ ಹುಟ್ಟುಹಬ್ಬಕ್ಕೆ ತನ್ನನ್ನು ಆಹ್ವಾನಿಸಿದ ದಿನವೇ ಗುನ್ನಾಲಾಲ್ ನೆಕ್ಲೇಸನ್ನು ಖರೀದಿಸಿ ತಂದು ಸೊಸೆಯ ಕೈಗೆ ಕೊಟ್ಟಿದ್ದ. ತನ್ನ ಕಂಪನಿಯ ಮೇಲೆ ಜಿಎಸ್‌ಟಿ ರೈಡನ್ನು ರದ್ದುಪಡಿಸಿದ್ದಕ್ಕೆ ಈ ನೆಪದಲ್ಲಿ ಕೃತಜ್ಞತೆ ಸಲ್ಲಿಸುವ ಸಲುವಾಗಿ ಬೆಲೆಬಾಳುವ ಗಿಫ್ಟನ್ನು ತಂದಿದ್ದ ಗುನ್ನಾಲಾಲ್. ಗಿಫ್ಟನ್ನು ಸ್ವೀಕರಿಸಿದ ಪೂರ್ವಿಕಾ 'ಥ್ಯಾಂಕ್ಯೂ ಸೋ ಮಚ್ ಫಾರ್ ದಿ ಸ್ವೀಟ್ ಅಂಡ್ ರಿಚ್ ಗಿಫ್ಟ್ ಆಂಟಿ' ಎಂದು ಸುಕೋಮಲವಾಗಿ ನಕ್ಕಿದ್ದಳು. ಧನ್ಯವಾದಗಳು ಹೇಳುತ್ತಾ ಎಲ್ಲರ ಕೈ ಕುಲುಕಿದ್ದಳು. ಆಸ್ಕರ್ ವೈಲ್ಡನ ಕೈಯ್ಯನ್ನು ಸ್ವಲ್ಪ ಜೋರಾಗಿಯೇ ಅಮುಕಿದ್ದಳು. ಆ ಸ್ಪರ್ಶ

## ಕಳೆದ ಸಂಚಿಕೆಯಲ್ಲಿ



ಯೂನಿವರ್ಸಿಟಿಗೆ ಮೊದಲಿಗನಾದ ಮಗನ ಸಾಧನೆ ಆಸ್ಕರ್ ವೈಲ್ಡ್‌ನ ತಂದೆಗೆ ಖುಷಿ ಕೊಡಲಿಲ್ಲ. ಮಗ ಪಿಎಚ್‌ಡಿ. ಮಾಡಬೇಕೆನ್ನುವ ಪ್ರಸ್ತಾಪವೂ ಅವನಿಗೆ ಇಷ್ಟವಾಗಲಿಲ್ಲ. ಮಗನನ್ನು ತನ್ನ ದಾರಿಗೆ ತಂದುಕೊಳ್ಳುವ ಉದ್ದೇಶದಿಂದ ಮದುವೆ ಮಾಡಲು ಉದ್ದೇಶಿಸಿದ. ಆ ಪ್ರಸ್ತಾಪ ಎಲ್ಲರಿಗೂ ಇಷ್ಟವಾಯಿತು ಹಾಗೂ ಹೆಣ್ಣನ್ನು ನೋಡಲು ವೈಲ್ಡ್ ಕೂಡ ಒಪ್ಪಿಕೊಂಡ. ಸಾಯಿಪ್ರಭೆಯೊಂದಿಗಿನ ಭೇಟಿ ವೈಲ್ಡ್‌ಗೆ ಅಚ್ಚರಿಯದ್ದಾಗಿತ್ತು. ಅಂಜಲಿ ದೇಸಾಯಿಯ ಗೆಳತಿಯಾಗಿದ್ದ ಸಾಯಿಪ್ರಭೆ, ಗುಣದಲ್ಲಿ ತನ್ನ ಕುಟುಂಬದ ಧಾರ್ಮಿಕತೆಗೆ ಸಂಪೂರ್ಣ ವಿರುದ್ಧವಾಗಿದ್ದಳು. ಭಕ್ತಿಯನ್ನು ಹೊಂದಿದ್ದರೂ, ಬದುಕಿನ ಬಳಸು ಮಾರ್ಗದ ಬಗ್ಗೆಯೂ ಅವಳಿಗೆ ಆಸಕ್ತಿಯಿತ್ತು. ಸಂಬಂಧ ಕೂಡಿಬರುವ ಬಗ್ಗೆ ವಿಚಾರಿಸಲು ಗುನ್ನಾಲಾಲ್ ಪ್ರಖ್ಯಾತ ಜ್ಯೋತಿಷಿಯ ಬಳಿಗೆ ಹೋದ. ಆ ಸಮಯದಲ್ಲೇ ಗುನ್ನಾಲಾಲ್ ಕಚೇರಿಯ ಮೇಲೆ ಜಿಎಸ್‌ಟಿ ಅಧಿಕಾರಿಗಳು ದಾಳಿ ಮಾಡಿದ ಸುದ್ದಿ ಬಂತು. ಜ್ಯೋತಿಷಿ ಸಂದೀಪ್ ಕೊಚಾರನ್ ಸಹಾಯದಿಂದ ಸಮಸ್ಯೆ ಸುಲಭವಾಗಿ ಬಗೆಹರಿಯಿತು. ಆ ಸಂದರ್ಭ ಗುನ್ನಾಲಾಲ್ ಕುಟುಂಬಕ್ಕೆ ಹೊಸ ಸಾಧ್ಯತೆಯೊಂದನ್ನು ತೆರೆಯಿತು.

ಅವನ ನರನಾಡಿಗಳ ತುಂಬೆಲ್ಲಾ ಪ್ರವಹಿಸಿದಂತೆ ಭಾಸವಾಗಿತ್ತು. ಅರ್ಧಗಂಟೆಯಲ್ಲಿ ವಿಶ್ ಮಾಡುವ ಪ್ರೋಗ್ರಾಮ್ ಮುಗಿದು ಊಟಕ್ಕೆ ಕುಳಿತಿದ್ದರು. ಊಟ ಮಾಡುತ್ತಾ ಗುನ್ನಾಲಾಲ್ ಮತ್ತು ಭವರ್ ಲಾಲ್, ವಿಕ್ರಂ ದೇಶಪಾಂಡೆಯ ಉಪಕಾರಕ್ಕೆ ಕೃತಜ್ಞತೆಗಳನ್ನು ಹೇಳಿದ್ದರು. ಪೂರ್ವಿಕಾ ಮತ್ತು ಆಸ್ಕರ್ ವೈಲ್ಡ್ ಒಬ್ಬರಿಗೊಬ್ಬರು ವಾರೆನೋಟಗಳನ್ನು ಬದಲಾಯಿಸಿಕೊಳ್ಳುತ್ತಿದ್ದರು. ಹೆಚ್ಚು ಮಾತನಾಡದೆ ಊಟ ಮುಗಿದಿತ್ತು. ಇನ್ನೇನು ಊಟ ಮುಗಿಸಿ ಪರಸ್ಪರ ಬೀಳ್ಕೊಳ್ಳುವಾಗ ವಿಕ್ರಂ ದೇಶಪಾಂಡೆ ಸಾವಧಾನವಾಗಿ ಮಾತನಾಡಲು ಪ್ರಾರಂಭಿಸಿದರು. ಡೈನಿಂಗ್ ಟೇಬಲ್ಲಿನಲ್ಲಿದ್ದ ಎಲ್ಲರೂ ದೇಶಪಾಂಡೆಯ ಮಾತುಗಳಿಗೆ ಕಿವಿಯಾದರು.

'ಮಿಸ್ಟರ್ ಗುನ್ನಾಲಾಲ್ ಜಿ, ನಾನು ಸೀದಾ ಸಾದಾ ಮನುಷ್ಯ. ಸುತ್ತಿ ಬಳಸಿ ಮಾತನಾಡುವ ಸ್ವಭಾವ ನನ್ನದಲ್ಲ. ಮುಂಬಯಿಯಲ್ಲಿ ಯಾರನ್ನು ಬೇಕಾದರೂ ನನ್ನ ಬಗ್ಗೆ ಕೇಳಿ ತಿಳಿದುಕೊಳ್ಳಬಹುದು. ನನಗೆ ಪೂರ್ವಿಕಾ ಒಬ್ಬಳೇ ಮಗಳು. ಯಾರದೋ ಕಾಂಟ್ಯಾಕ್ಟ್‌ನಲ್ಲಿ ನನ್ನ ಮಗಳಿಗೆ ನಿಮ್ಮ ಮೊಮ್ಮಗ ಆಸ್ಕರ್ ವೈಲ್ಡ್ ಉರೂಫ್ ಸೋನಾಲಾಲ್ ಬಗ್ಗೆ ಆಸಕ್ತಿ ಮೂಡಿದೆ. ಅವಳಿಗೆ ಇಷ್ಟವಾದಂತೆ ನಡೆದುಕೊಳ್ಳುವುದು ನನ್ನ ಕರ್ತವ್ಯ. ನಮ್ಮ ಹುಡುಗಿಗೂ ಓಡಾಟ, ಸಂಗೀತ, ಸಾಹಿತ್ಯ ಅಂದರೆ ತುಂಬಾನೆ ಇಂಟರೆಸ್ಟ್. ನಿಮ್ಮ ಮನೆಯಲ್ಲಿ ಎಲ್ಲರಿಗೂ ಒಪ್ಪಿಗೆಯಾದ ಪಕ್ಷದಲ್ಲಿ ಹುಡುಗ ಹುಡುಗಿ ಇಬ್ಬರನ್ನೂ ಎರಡು ತಿಂಗಳು ಫ್ರೀಯಾಗಿ ಓಡಾಡಲು ಬಿಡೋಣ. ಅವರಿಬ್ಬರು ಎರಡು ತಿಂಗಳ ಅವಧಿಯಲ್ಲಿ ಒಬ್ಬರನ್ನೊಬ್ಬರು ಎಷ್ಟು ಆಳವಾಗಿ ಅರಿತುಕೊಳ್ಳುತ್ತಾರೆ ಎಂಬುದನ್ನು ಹಿಡಿದು ನಮ್ಮ ಸಂದೀಪ್ ಕೊಚಾರರ ಸೂಚನೆಯ ಮೇಲೆ ಮುಂದಿನ ಏರ್ಪಾಡುಗಳಲ್ಲಿ ತೊಡಗಬಹುದು. ಈಗಿನ ಟ್ರೆಂಡ್ ಇದು. ಮನುಷ್ಯ ಎಷ್ಟೇ ಶ್ರೀಮಂತನಾದರೂ ಎಷ್ಟೇ ಬಲಾಢ್ಯನಾದರೂ, ಎಷ್ಟೇ ಬುದ್ಧಿವಂತನಾದರೂ, ಎಷ್ಟೇ ಖ್ಯಾತಿವಂತನಾದರೂ ಕೌಟುಂಬಿಕ ನೆಮ್ಮದಿಯಿಲ್ಲದಿದ್ದರೆ ಪ್ರಯೋಜನವಿಲ್ಲದವನಾಗಿಬಿಡುತ್ತಾನೆ.

ನಾನು ನನ್ನ ಅಧಿಕಾರ ಮತ್ತು ಹುದ್ದೆಗಳಿಂದ ಒಂದೇ ಒಂದು ನಯಾಪೈಸೆಯನ್ನೂ ಲಂಚವನ್ನಾಗಿ ಪಡೆದಿಲ್ಲ. ನನ್ನ ಅಪ್ಪ ಎಪ್ಪತ್ತು, ಎಂಬತ್ತು ಮತ್ತು ತೊಂಬತ್ತರ ದಶಕದ ಮುಂಬಯಿಯ ದೊಡ್ಡ ಬಿಲ್ಡರ್. ಅಪ್ಪನ ಬಳಿ ವಿವಿಧ ಇಲಾಖೆಗಳ ಅಧಿಕಾರಿಗಳು, ಅಂಡರ್ ವರ್ಲ್ಡ್‌ನವರು, ರಾಜಕಾರಣಿಗಳು ದುಡ್ಡಿಗಾಗಿ, ಸಹಾಯಕ್ಕಾಗಿ ಬರುತ್ತಿದ್ದರು. ಆದರೆ ಅಪ್ಪ ಮಾತ್ರ ಯಾವತ್ತೂ ಧೈರ್ಯದಿಂದ, ನೆಮ್ಮದಿಯಿಂದ ಇದ್ದಿದ್ದನ್ನು ನಾನು ಕಂಡಿರಲಿಲ್ಲ. ಈಗಲೂ ಕೋಟ್ಯಂತರ ರೂಪಾಯಿ ಪ್ರತಿ ತಿಂಗಳು ಆದಾಯ ಬರುತ್ತಿದೆ. ಆದರೆ ಆ ಎಲ್ಲಾ ಆದಾಯಗಳಿಗಿಂತಲೂ ಅಧಿಕಾರ ನೀಡುತ್ತಿರುವ ಖುಷಿಯೇ ದೊಡ್ಡದೆನಿಸುತ್ತಿದೆ. ನನ್ನ ಮಗಳನ್ನೂ ಐಎಎಸ್ ಅಥವಾ ಐಪಿಎಸ್ ಅಧಿಕಾರಿಯನ್ನಾಗಿ ಮಾಡಬೇಕೆಂದು ನನ್ನ ಕನಸಾಗಿತ್ತು. ಆದರೆ ಅವಳಿಗೆ ಆ ಬಗ್ಗೆ ಕಿಂಚಿತ್ತೂ ಆಸಕ್ತಿಯಿಲ್ಲ. ಕೆಮಿಸ್ಟ್ರಿ ಮತ್ತು ಮ್ಯಾಥ್ಸ್ ಅವಳ ಇಷ್ಟದ ಸಬ್ಜೆಕ್ಟುಗಳು. ಹಾಗಾಗಿ ಎಮ್ಮೆಸ್ಸಿ ಕೆಮಿಸ್ಟ್ರಿಯಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದಾಳೆ. ಇನ್ನೊಂದು ಅಚ್ಚರಿಯ ಸಂಗತಿಯೆಂದರೆ, ನನ್ನ ಮಗಳಿಗೆ ಷೇರು ಮಾರುಕಟ್ಟೆ ಬಗ್ಗೆ ಫೆಂಟಾಸ್ಟಿಕ್ ನಾಲೆಡ್ಜ್ ಇದೆ. ಅದೊಂದು ಗೇಮ್ ಅಷ್ಟೆ ಅವಳಿಗೆ. ಇನ್ನು ನಮಗೆ ನಿಮ್ಮ ಹುಡುಗ ಓಕೆ ಆಗಿದ್ದಾನೆ. ಮಿಸ್ಟರ್ ಗುನ್ನಾಲಾಲ್, ನೀವು ಒಟ್ಟಿಗೆ ಮಾತನಾಡಿಕೊಂಡು ನಿಮ್ಮ ಒಟ್ಟಾರೆ